**<u>ದಿನಾಂಕಃ 10.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಃ ವಾದಿ ಪರ ಶ್ರೀ ಎಸ್.ಬಿ.ಡಿ. ವಕೀಲರಿಂದಃ</u>**

1) ನಾನು 1985-86 ರಲ್ಲಿ ನಾನು ಪತ್ರ ಬರಹಗಾರನಾಗಿ ಪರವಾನಗಿಯನ್ನು ಪಡೆದಿರುತ್ತೇನೆ. ನನ್ನ ಪರವಾನಗಿ ಸಂಖ್ಯೆ 359/1985-86 ಆಗಿರುತ್ತದೆ. ದಾಖಲೆಯನ್ನು ನೋಡದೆ ನಾನು ಯಾವ ದಿನಾಂಕಂದಂದು ಈ ಪ್ರಕರಣದ ಪಕ್ಷಗಾರರು ನನ್ನ ಬಳಿಗೆ ಪತ್ರವನ್ನು ತಯಾರಿಸಿಕೊಳ್ಳಲು ಬಂದಿದ್ದರು ಎಂದು ಹೇಳಲು ಆಗುವುದಿಲ್ಲ. ನಾನು ಪತ್ರವನ್ನು ತಯಾರಿಸಿದ ನಂತರ ಆ ಬಗ್ಗೆ ನಾನು ನೊಂದಣಿ ಪುಸ್ತಕವನ್ನು ಇಟ್ಟು ಅದರಲ್ಲಿ ನಮೂದು ಮಾಡುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳು ನನ್ನ ಬಳಿಗೆ ಕ್ರಯ ಕರಾರು ಪತ್ರವನ್ನು ತಯಾರಿಸಿಕೊಡುವಂತೆ ಕೇಳಿ ಬಂದಿದ್ದರು. ಸದರಿಯವರು ನನ್ನ ಬಳಿಗೆ ಯಾವ ದಿನಾಂಕದಂದು ಬಂದಿದ್ದರು ಎಂಬುದನ್ನು ನಾನು ಪತ್ರ ನೋಡಿ ಹೇಳಬೇಕಾಗುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿದಲ್ಲಿನ ಸಂಗತಿಗಳು ನನಗೆ ತಿಳಿಸಿದರುತ್ತದೆ. ನಿಡಿ.1 ರ ಕರಾರು ಪತ್ರವನ್ನು ವಾದಿ ಮತ್ತು ಪ್ರತಿವಾದಿಗಳ ಪೈಕಿ ಯಾರು ತಂದಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ನನಗೆ ನಿಡಿ.1 ರ ಕರಾರು ಪತ್ರದಲ್ಲಿನ ಸಂಗತಿಗಳ ಬಗ್ಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಪತ್ರವನ್ನು ನೋಡಿ ಹೇಳುತ್ತೇನೆ ಎಂದು ನುಡಿಯುತ್ತಾರೆ. ನಿಡಿ.1 ರ ಕರಾರು ಪತ್ರಕ್ಕೆ ಯಾವ ಬಣ್ಣದ ಶಾಹಿಯಿಂದ ಬೆರಳಚ್ಚು ಮಾಡಲಾಗಿದೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಪತ್ರವನ್ನು ನೋಡದೆ ಸದರಿ ಪತ್ರಕ್ಕೆ ಯಾರು ಯಾರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ. ನಾನು ಹೇಳಿದಂತೆ ನಾನು ಯಾವುದೇ ಕರಾರು ಪತ್ರವನ್ನು ತಯಾರಿಸಿದ ಕಾರಣ ನನಗೆ ಆ ಪತ್ರದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಆದರೂ ಸಹ ನಾನು ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.1 ರ ಕರಾರು ಪತ್ರವನ್ನು ನೊಂದಾವಣೆ ಮಾಡಿಸಿರುವುದಿಲ್ಲ. ಕರಾರು ಪತ್ರವನ್ನು ತಯಾರಿಸುವ ಪೂರ್ವದಲ್ಲಿ ಆ ಪತ್ರದಲ್ಲಿ ತಿಳಿಸಿದ ಮಾಲೀಕ ಯಾರು ಎಂದು ವಿಚಾರಿಸಿದ್ದು ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ಕರಾರು ಪತ್ರವನ್ನು ತಯಾರಿಸುವ ಕಾಲಕ್ಕೆ ಅದರಲ್ಲಿ ನಮೂದಿಸಿದ ಆಸ್ತಿಯು ವಾದಿಯ ಹೆಸರಿನಲ್ಲಿ ಇತ್ತು.

2) ಈ ಹಿಂದೆ ನಾನು ಪ್ರತಿವಾದಿಯ ಪರವಾಗಿ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 45/2019 ರ ಪ್ರಕರಣದಲ್ಲಿ ಸಾಕ್ಷ್ಯ ನುಡಿದಿರುತ್ತೇನೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಜೊತೆ ಶಾಮೀಲಾಗಿ ನಿಡಿ.1 ರ ಕರಾರು ಪತ್ರವನ್ನು ಸೃಷ್ಟಿ ಮಾಡಿ ಅದರ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.1 ರ ಕರಾರು ಪತ್ರಕ್ಕೂ ಮತ್ತು ವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**